# ಶ್ರೀರಾಮನವಮಿಗೆ 'ಹೊಯ್ಸಳ'ನ ಅಬ್ಬರ!

ಕೆ.ಆರ್.ಕೆ. ಪ್ರೊಡಕ್ಷನ್ ಮತ್ತು ಡಾಲಿ ಧನಂಜಯ್ ಕಾಂಬಿನೇಷನ್‌ನಲ್ಲಿ ಸಾಲು ಸಾಲು ಸಿನಿಮಾಗಳು ಬರುತ್ತಿರುವುದು ಗೊತ್ತೇ ಇದೆ. ಆ ಸಾಲಿನಲ್ಲಿ ಎದ್ದುಕಾಣುತ್ತಿದ್ದ ಸಿನಿಮಾ 'ಹೊಯ್ಸಳ'. ಆ ಸಿನಿಮಾದ ಬಿಡುಗಡೆಗೀಗ ದಿನ ನಿಗದಿಯಾಗಿದೆ. 2023ರ ಮಾರ್ಚ್ 30ರಂದು 'ಹೊಯ್ಸಳ'ದ ಸೈರನ್ ತೆರೆಯ ಮೇಲೆ ಮೊಳಗಲಿದೆ. ಶ್ರೀರಾಮ ನವಮಿಯ ದಿನದಂದೇ ಈ ಚಿತ್ರವನ್ನು ಸಿನಿಪ್ರೇಕ್ಷಕರಿಗೆ ನೀಡಲು ಚಿತ್ರತಂಡ ನಿರ್ಧರಿಸಿದೆ.

'ಹೊಯ್ಸಳ' ಎಂದಾಕ್ಷಣ ನಮಗೆ ನೆನಪಾಗುವುದು ಇತಿಹಾಸದ ಪ್ರಸಿದ್ಧ ರಾಜಮನೆತನ. ಆದರೆ ಇದು ಐತಿಹಾಸಿಕ ಕಥೆಯೇನಲ್ಲ. ಹೊಯ್ಸಳ ಎನ್ನುವ ಪದದ ಜೊತೆಗೇ ಮನಸಲ್ಲಿ ರಿಂಗಣಿಸುವ ಇನ್ನೊಂದು ಶಬ್ದವೂ ಇದೆ. ಅದು ಪೊಲೀಸ್ ವಾಹನದ ಸೈರನ್. ಬೆಂಗಳೂರಿನಲ್ಲಿ ಗಸ್ತುತಿರುಗುವ ಹೊಯ್ಸಳ ಪೊಲೀಸ್ ಜೀಪನ್ನು ಎಲ್ಲರೂ ನೋಡಿಯೇ ಇರುತ್ತಾರೆ. ಈ ಸಿನಿಮಾದ ಹೆಸರಿನ ಹಿಂದೆ ಅಂಥದ್ದೊಂದು ಖಾಕಿ ಕಥೆಯಿದೆ. ಡಾಲಿ ಧನಂಜಯ್ ಇಲ್ಲಿ ಪೊಲೀಸ್ ಖದರ್ ತೋರಿಸಿದ್ದಾರೆ.

ಮೈಸೂರಿನಲ್ಲಿ ಮೊದಲ ಹಂತದ ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಈಗ ಎರಡನೇ ಹಂತದ ಚಿತ್ರೀಕರಣವನ್ನು ಬೆಂಗಳೂರಿನಲ್ಲಿ ನಡೆಸಿದೆ. ಆಗಲೇ ಬಿಡುಗಡೆಯ ದಿನಾಂಕವನ್ನೂ ಘೋಷಣೆ ಮಾಡಿದೆ.

ಧನಂಜಯ್ ಅವರು ಗುರುದೇವ ಹೊಯ್ಸಳ ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವ ಈ ಸಿನಿಮಾದ ನಾಯಕಿ, ಅಮೃತಾ ಅಯ್ಯಂಗಾರ್. ಅಚ್ಯುತಕುಮಾರ್, ಪ್ರತಾಪ್ ನಾರಾಯಣ್, ನವೀನ್ ಶಂಕರ್, ಅವಿನಾಶ್ ಕೆ.ಜಿ.ಎಫ್, ರಾಘು ಶಿವಮೊಗ್ಗ ಮುಂತಾದವರು ತಾರಾಗಣದಲ್ಲಿದ್ದಾರೆ. ಕಾರ್ತಿಕ್ ಗೌಡ ಹಾಗೂ ಯೋಗಿ ಜಿ ರಾಜ್ ಈ ಚಿತ್ರಕ್ಕೆ ಹಣ ಹೂಡಿದ್ದಾರೆ. ವಿಜಯ್ ನಾಗೇಂದ್ರ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾಕ್ಕೆ ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ ಮಾಡಿದ್ದಾರೆ. ■




# ವಿವಾಹಿತರ ಬ್ಯಾಚುಲರ್ ಪಾರ್ಟಿ!

ನಟ, ನಿರ್ದೇಶಕ ರಿಷಭ್ ಶೆಟ್ಟಿಗೆ ಹೆಣ್ಣುಮಗುವಾಗಿರುವ ಸುದ್ದಿ ಗೊತ್ತಿದೆಯಲ್ಲ. ಎರಡು ಮಕ್ಕಳ ತಂದೆಯಾಗಿದ್ದರೂ ರಿಷಭ್ ಅವರಿನ್ನೂ ಬ್ಯಾಚುಲರ್ ಪಾರ್ಟಿ ಮಾಡುವ ಹುಮ್ಮಸ್ಸಿನಲ್ಲೇ ಇದ್ದಾರೆ! ಅವರ ಈ ಉತ್ಸಾಹಕ್ಕೆ ಇನ್ನಿಬ್ಬರು ವಿವಾಹಿತ ನಟರಾದ ದಿಗಂತ್ ಮತ್ತು ಅಚ್ಯುತಕುಮಾರ್ ಸಾಥ್ ಕೊಡುತ್ತಿದ್ದಾರೆ. ಇದೇನು ವಿಚಿತ್ರ ಸುದ್ದಿ ಎಂದು ಹುಬ್ಬೇರಿಸಬೇಡಿ. ಈ ಸುದ್ದಿ ನಿಜವೇ. ಆದರೆ ವಿಚಿತ್ರವೇನಲ್ಲ. ರಿಷಭ್, ದಿಗಂತ್ ಮತ್ತು ಅಚ್ಯುತ್ ಮೂವರ ಕಾಂಬಿನೇಷನ್‌ನಲ್ಲಿ 'ಬ್ಯಾಚುಲರ್ ಪಾರ್ಟಿ' ಎಂಬ ಸಿನಿಮಾವೊಂದು ಇತ್ತೀಚೆಗಷ್ಟೇ ಪ್ರಾರಂಭವಾಗಿದೆ. ಪರಂವಃ ಸ್ಟುಡಿಯೋಸ್ ನಿರ್ಮಿಸುತ್ತಿರುವ ಈ ಸಿನಿಮಾಕ್ಕೆ ಅಭಿಜಿತ್ ಮಹೇಶ್ ಎನ್ನುವವರು ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಇವರು ಈ ಮೊದಲು 'ಕಿರಿಕ್ ಪಾರ್ಟಿ', 'ಅವನೇ ಶ್ರೀಮನ್ನಾರಾಯಣ', 'ಸ.ಹಿ.ಪ್ರಾ. ಶಾಲೆ, ಕಾಸರಗೋಡು' ಸಿನಿಮಾಗಳಿಗೆ ಕಥೆ–ಚಿತ್ರಕಥೆ ವಿಭಾಗದಲ್ಲಿ ಕೆಲಸ ಮಾಡಿದ್ದರು.

'ಇದೊಂದು ಕಾಮಿಡಿ ಎಂಟರ್‌ಟೈನ್ಮೆಂಟ್ ಸಿನಿಮಾ. ಶೀರ್ಷಿಕೆಯಷ್ಟೇ ಕಥೆಯೂ ಫ್ರೆಶ್ ಆಗಿದೆ. ರಕ್ಷಿತ್ ಮತ್ತು ರಿಷಭ್ ಅವರ ಜೊತೆಗೆ ಕೆಲಸ ಮಾಡುವುದು ನನಗೆ ಹೊಸತೇನಲ್ಲ. ಈ ತಂಡಕ್ಕೆ ಈಗ ದಿಗಂತ್ ಸೇರಿಕೊಂಡಿದ್ದಾರೆ. ಮದುವೆ ಮತ್ತು ಪ್ರೇಮ ಜೀವನವನ್ನು ವಿಡಂಬನಾತ್ಮಕವಾಗಿ ತೋರಿಸುವ ಪ್ರಯತ್ನವನ್ನು ಈ ಸಿನಿಮಾದ ಮೂಲಕ ಮಾಡುತ್ತಿದ್ದೇವೆ' ಎಂದು ನಿರ್ದೇಶಕ ಅಭಿಜಿತ್ ಮಹೇಶ್ ಹೇಳಿದ್ದಾರೆ. ■


ಅಚ್ಯುತ ಕುಮಾರ್


ದಿಗಂತ್


ರಿಷಭ್ ಶೆಟ್ಟಿ


ಅಭಿಜಿತ್ ಮಹೇಶ್